## <u>ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಅರಕಲಗೂಡು.</u>

**ಅಪರಾಧ ಪ್ರಕರಣ ಸಂಖ್ಯೆಃ 456/2023**

| | | |
|---|---|---|
| **ಸಾಕ್ಷಿಯ ಹೆಸರು** | ರಂಜಿತ್ , 29 ವರ್ಷ | ಚಾಸಾ-6 |
| **ತಂದೆಯ ಹೆಸರು** | ವಿರುಪಾಕ್ಷ | |
| **ಉದ್ಯೋಗ** | ಪಂಚಾಯ್ತಿಯಲ್ಲಿ ಕೆಲಸ | ಪ್ರಾಸಾ-3 |
| **ವಾಸ ಸ್ಥಳ** | ಸೋಂಪುರ | |
| **ದಿನಾಂಕಃ 20.08.2026** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು. | | |

<u>**ಮುಖ್ಯ ವಿಚಾರಣೆಃ**</u> ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ

ಸಾಕ್ಷಿಯು ನಿಪಿ 2 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು , ಅದನ್ನು ನಿಪಿ 2ಬಿ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಪೋಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ನಿಪಿ2 ರಲ್ಲಿ ಬರೆದಿರುವ ಸಂಗತಿಗಳು ನನಗೆ ಗೊತ್ತಿಲ್ಲ. ಪೋಲೀಸರು ಓದಿ ಹೇಳಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಆ ದಿನ ಪೋಲೀಸರು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಸಾಕ್ಷಿಯು ನ್ಯಾಯಾಲಯದ ಸಮಕ್ಷಮ ಇರುವ ಕಲ್ಲು ಮತ್ತು ರಾಡ್ ನ್ನು ನೋಡಿ ಗುರುತಿಸಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿದಾರ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಗೆ ಪಾಟೀ ಸವಾಲನ್ನು ಮಾಡಲು ಅನುಮತಿ ನೀಡಲು ಕೋರಿದ ಮೇರೆಗೆ, ಪಾಟೀ ಸವಾಲಿಗಾಗಿ ಅನುಮತಿಯನ್ನು ನೀಡಲಾಯಿತು)**

<u>**ಪಾಟೀ ಸವಾಲುಃ**</u> ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ.

ದಿಃ 18.04.23 ರಂದು ಸೋಂಪುರ ಗ್ರಾಮದೊಳಗಿನ ಟಾರು ರಸ್ತೆಯಲ್ಲಿ ಬೆ. 9-30 ರಿಂದ 10-30 ರ ಸಮಯದಲ್ಲಿ ಪೋ.ರು ನನ್ನ ಮತ್ತು ಚಾಸಾ 1 ಹಾಗೂ 5 ರವರ ಸಮಕ್ಷಮ ಕೃತ್ಯ ಸ್ಥಳ ಮತ್ತು ಅಮಾನತ್ ಮಹಜರ್ ಮಾಡಿದ್ದು ಆ ಕಾಲಕ್ಕೆ ಪೋ.ರು ನನ್ನ ಸಮಕ್ಷಮ ಒಂದು ಕಬ್ಬಿಣದ ರಾಡು ಕಲ್ಲನ್ನು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ. ನಿಪಿ 2 ಕ್ಕೆ ನಾನು ಸದರಿ ಸ್ಥಳದಲ್ಲಿ ಮಾಡಿದ್ದೆ ಎಂದರೆ ಸರಿಯಲ್ಲ.

<u>**ಪಾಟೀ ಸವಾಲುಃ** ಆರೋಪಿ ಪರ ವಕೀಲರು</u> **ಶ್ರೀ. ಎನ್ ಕೆ** ರವರಿಂದ. ಇಲ್ಲಾ

**ಮರುವಿಚಾರಣೆ – ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿಯಿದೆ.

**ಪ್ರ. ಸಿವಿಲ್ ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಧೀಶರು.**
**ಅರಕಲಗೂಡು**